ಕಥೆ

# ನಾವೇ ತರುವೆವು ಆ ಬೆಳಗನು...!



**ಸುಮಂಗಲಾ**

ಕಲೆ: ವಿಶ್ವನಾಥ್ ಎ.ಎಸ್.

ವಿನುತಾ ಆ ದಿನ ಬೇಗನೆ ಆಫೀಸಿಗೆ ಬಂದಳು. ಶುಕ್ರವಾರದ ಟ್ರಾಫಿಕ್ ಅಚ್ಚರಿಯೆಂಬಂತೆ ಕಡಿಮೆಯಿತ್ತು. ಮೇಲೆ ಬೋರ್ಡ್ ರೂಮಿನಲ್ಲಿ ಮೀಟಿಂಗ್ ಶುರುವಾಗೋದಕ್ಕಿಂತ ಮುಂಚೆ ಅವರಿಗೆ ಸಿದ್ಧಮಾಡಿಕೊಡಬೇಕಾದ ಒಂದೆರಡು ಕೆಲಸವಿತ್ತೆಂದು ಮನೆಯಿಂದ ಅರ್ಧಗಂಟೆ ಬೇಗ ಹೊರಟಿದ್ದಳು. ಕೆಳಗೆ ಪಾರ್ಕಿಂಗ್‌ನಲ್ಲಿ ಯಾರದ್ದೂ ದೊಡ್ಡ ಕಾರುಗಳು ಕಾಣಿಸಲಿಲ್ಲ. ಇನ್ನೂ ಎಂಟೂವರೆ ಎಂದುಕೊಳ್ಳುತ್ತ ಇನ್ನೇನು ಗಾಜಿನ ಬಾಗಿಲು ದಾಟಿ ಒಳಹೋಗಬೇಕು... ಅಷ್ಟರಲ್ಲಿ ಆ ಕಡೆ ಜನರೇಟರ್ ರೂಮಿನ ಪಕ್ಕ ಒಂದು ಚಿಕ್ಕ ಸೈಕಲನ್ನು ವಾಲಿಸಿ ಇಟ್ಟದ್ದು ಕಾಣಿಸಿತು. ಅದು ದಿನಾ ಅಲ್ಲಿರುತ್ತಿತ್ತೇನೋ... ಅದರ ಈಚೆ ಬದಿಗಳಲ್ಲಿ ಕಾರುಗಳು ಇರುತ್ತಿದ್ದರಿಂದ ಕಾಣಿಸಿರಲಿಕ್ಕಿಲ್ಲ... ಯಾರದ್ದಿರಬಹುದು ಎಂದುಕೊಳ್ಳುತ್ತಲೇ ಸೆಕ್ಯುರಿಟಿಯವನಿಗೆ ಕೇಳಿದಳು. ಪ್ಯಾಂಟ್ರಿಯಲ್ಲಿ ಕೆಲಸ ಮಾಡುವ ಚೋಟೂನದು ಎಂದನಾತ. ಹತ್ತಿರ ಹೋಗಿ ನೋಡಿದಳು.

'ಅರೆ... ಲೇಡೀಸ್ ಸೈಕಲ್...' ತುಸು ಹಳೆಯ ಪುಟಾಣಿ ಸೈಕಲ್.

ಎಲ್ಲರಿಂದ ಚೋಟೂ ಎಂದು ಕರೆಸಿಕೊಳ್ಳುತ್ತ ದೀಪಂಕರ ಎಂಬ ಸುಂದರ ಹೆಸರಿರುವುದನ್ನೇ ಮರೆತಿದ್ದ ಜಾರ್ಖಂಡಿನ ಯಾವುದೋ ಹಳ್ಳಿಯ ಹುಡುಗ. 'ಅಂವಂದಾ?' ಅಪನಂಬಿಕೆಯಿಂದ ಕೇಳಿದಳು.

'ಹಾಂ... ಅವನ ತಂಗಿಯದಂತೆ. ಅವಳಿಗೆ ಮದುವೆಯಾಯಿತು. ಇವನು ತರ್ತಾ ಇದ್ದಾನೆ'

ಸೈಕಲ್ ಹ್ಯಾಂಡಲನ್ನು ಮುಟ್ಟಿ, ಹೀಗೆ ನೇವರಿಸಿದ ವಿನುತಾಳಿಗೆ ಥಟ್ಟನೆ ಸೈಕಲ್ ಮೇಲೆ ಒಂದು ರೌಂಡ್ ಹೋಗಿಬರುವ ಹುಕಿ ಆವರಿಸಿತು.

ಇನ್ನೂ ಯಾರೂ ಬಂದಂತಿಲ್ಲ. ಹೋಗಿಬಂದರೆ... ಯಾವ ಕಾಲವಾಯಿತಲ್ಲ ಸೈಕಲ್ ತುಳಿಯದೇ...

ಚೋಟೂನ ಕರೆಸಿ, 'ಒಂದು ರೌಂಡ್ ಹೋಗಿಬರತೀನಿ, ಕೀ ಕೊಡು' ಎಂದು ಕೀ ಇಸಿದುಕೊಂಡಳು. ಒಳಗೆ ನನ್ನ ಟೇಬಲ್ ಮೇಲೆ ಇಡು ಎಂದು ತನ್ನ ಚೀಲವನ್ನು ಕೊಟ್ಟವಳೇ ಸೈಕಲನ್ನು ಆಫೀಸಿನ ಹೊರಭಾಗದವರೆಗೆ ದಬ್ಬಿಕೊಂಡು ಬಂದಳು.

ಅಲ್ಲಿಂದ ತುಸು ಇಳುಕಲು ರಸ್ತೆ... ಕಾಲುಗಳು ಸಲೀಸಾಗಿ ಪೆಡಲ್ ತುಳಿದವು. ಮುಂದೆ ಹೋಗಿ ಆಗೀಗ ತಾನು ವಾಕಿಂಗ್ ಹೋಗುವ ಅಡ್ಡರಸ್ತೆಗೆ ತಿರುಗಿದಳು. ಅಡ್ಡರಸ್ತೆಗೆ ತಿರುವಿಕೊಂಡಂತೆ ಬೆಳಗಿನ ತಿಳಿಗಾಳಿ ಮುಖವನ್ನು, ಕೈಗಳನ್ನು ತೀಡಿದಂತೆ ಮೈಯೆಲ್ಲ ಹಗುರೆನ್ನಿಸುತ್ತ, ಹೀಗೆಯೇ ಹೋಗುತ್ತಿರಬೇಕು ಎನ್ನಿಸಿತು. ಹೀಗೆ ತೇಲಿ ಸಾಗಿ ಹೋಗುವ ಕ್ಷಣಗಳು